# ಮೊದಲು ಅನರ್ಹತೆಯ ನಿರ್ಧಾರ ನಂತರ ರಾಜೀನಾಮೆ ತೀರ್ಮಾನ

ಸಂ.ಕ. 14-7-19

ಬೆಂಗಳೂರು: ಶಾಸಕರ ಅನರ್ಹತೆ ಬಗ್ಗೆ ತೀರ್ಮಾನ ಕೈಗೊಂಡ ನಂತರವೇ ರಾಜೀನಾಮೆ ಬಗ್ಗೆ ನಿರ್ಧಾರ ಕೈಗೊಳ್ಳುವುದು ಅನಿವಾರ್ಯವಾಗಿದೆ ಎಂದುಸ ಸಭಾಧ್ಯಕ್ಷ ರಮೇಶಕುಮಾರ್ ಸುಪ್ರೀಂಕೋರ್ಟ್‌ಗೆ ಮತ್ತೊಂದು ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಶಾಸಕರು ನೀಡಿರುವ ರಾಜೀನಾಮೆ ಪತ್ರ ದಿನಾಂಕ ಹಾಗೂ ವೇಳೆ. ಅದೇರೀತಿ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಕಾಂಗ್ರೆಸ್ ಹಾಗೂ ಜೆಡಿಎಸ್ ಮುಖಂಡರು ನೀಡಿರುವ ಅರ್ಜಿಯ ದಿನಾಂಕ ಹಾಗೂ ವೇಳೆ ಸೇರಿದಂತೆ ಎಲ್ಲಾ ವಿವರಗಳನ್ನೊಳಗೊಂಡ ಹದಿನೆಂಟು ಪುಟಗಳ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಶಾಸಕರು ಸಮಯವನ್ನು ಕೇಳದೆಯೇ ತಮ್ಮ ಗೈರು ಹಾಜರಿಯಲ್ಲಿ ರಾಜೀನಾಮೆ ಪತ್ರ ನೀಡಿದ್ದಾರೆ. ತದನಂತರ ಅಂಗೀಕರಿಸುತ್ತಿಲ್ಲ ಎಂದು ತಮ್ಮ ವಿರುದ್ಧವೇ ಆರೋಪ ಮಾಡಿದ್ದಾರೆ. ರಾಜೀನಾಮೆ ಕುರಿತಂತೆ ತಮ್ಮಿಂದ ಸ್ಪಷ್ಟನೆ ಪಡೆದುಕೊಳ್ಳದೆಯೇ ಸುಪ್ರೀಂಕೋರ್ಟ್‌ನದಲ್ಲಿ ಪ್ರಕರಣ ದಾಖಲಿಸುವ ಮೂಲಕ ಒಟ್ಟಾರೆ ಪ್ರಕರಣ ದಾರಿ ತಪ್ಪಿಸಲೆತ್ನಿಸಿದ್ದಾರೆ ಎಂದು ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ. ತಮ್ಮ ಗೈರು ಹಾಜರಾತಿಯಲ್ಲಿ ಕಚೇರಿಗೆ ಬಂದು ರಾಜೀನಾಮೆ ಪತ್ರ ನೀಡಿದ್ದರೂ, ಅವರೆಲ್ಲರಿಗೂ ಸ್ವೀಕೃತಿ ಪತ್ರ ನೀಡಲಾಗಿದೆ.



ಆದರೆ, ಹದಿಮೂರು ಜನರು ಒಟ್ಟಾಗಿ ರಾಜೀನಾಮೆ ಸಲ್ಲಿಸಿರುವುದರಿಂದ ಪರಿಶೀಲನೆ ಅನಿವಾರ್ಯ. ಈ ಬೆಳವಣಿಗೆಯನ್ನೂ ನಾನು ರಾಜ್ಯಪಾಲರ ಗಮನಕ್ಕೂ ತಂದಿದ್ದೇನೆ. ಎಲ್ಲಿಯೂ ಲೋಪವಾಗದಂತೆ ಎಚ್ಚರಿಕೆ ವಹಿಸಲಾಗಿದೆ ಎಂಬ ಸಂಗತಿಯನ್ನು ಪ್ರಮಾಣಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.